ಶ್ರೀ ಜೆ. ಎಚ್. ಪಟೀಲ್.—ಗುಲ್ಬರ್ಗಾದು ಪ್ರದೇಶ ಮತ್ತು ಬಯಲು ಸೀಮೆಗೆ ಬೇರೆ ಬೇರೆ ಕ್ರಮ ಇದೆ. ಆದರೆ ನಾನು ಈಗಾಗಲೇ ಹೇಳಿದಹಾಗೆ ಹರಿಜನ ಕಾಲೊನಿಗಳಿಗೆ, ಲಂಬಾಣಿ ತಾಂಡಗಳಿಗೆ, ಪಡ್ಡರ ಹಟ್ಟಿಗಳಿಗೆ ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್‌ನಲ್ಲಿ ಸವಲತ್ತುಗಳನ್ನು ಕೊಡುತ್ತೇವೆ. ಏನಾದರೂ ಅವರಿಗೆ ಸವಲತ್ತು ಕೊಡುವಾಗ ನಿಯಮ ಅಡ್ಡಿ ಬಂದರೆ ಅದನ್ನು ಬದಿಗೊತ್ತಿ ಸವಲತ್ತುಗಳನ್ನು ಕೊಡುತ್ತೇವೆ. ಎಲ್ಲರಿಗೂ ಈ ನಿಯಮವನ್ನು ತೆಗೆಯುವುದಕ್ಕಾಗುವುದಿಲ್ಲ.

ಬೀದರ್ ನಗರಕ್ಕೆ ಕುಡಿಯುವ ನೀರಿನ ಯೋಜನ ಬಗ್ಗೆ

149 ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ :—

ಅ) ಬೀದರ್ ನಗರಕ್ಕೆ ರೂ. 8ಕೋಟಿ ಅಂದಾಜು ವೆಚ್ಚದ ಯಾವುದಾದರೂ ಕುಡಿಯುವ ನೀರಿನ ಯೋಜನೆಯು ಸರ್ಕಾರದ ಮುಂದೆ ಇದೆಯೇ ;

ಆ) ಹಾಗಿದ್ದ ಪಕ್ಷದಲ್ಲಿ ಅದನ್ನು ಯಾವಾಗ ತೆಗೆದುಕೊಳ್ಳಲಾಗುತ್ತದೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ವಸತಿ ಶಾಖೆ ಸಚಿವರು)—(ಅ) ಇಲ್ಲ. ಆದರೆ ರೂ. 14.10 ಲಕ್ಷ ರೂಪಾಯಿಗಳ ಯೋಜನೆಗೆ 20-1-83 ರಲ್ಲಿ ಮಂಜೂರಾತಿ ನೀಡಿ ಕಾಮಗಾರಿ ಪ್ರಾರಂಭವಾಗಿದೆ. ಜೊತೆಗೆ ದಿನಂ ಪ್ರತಿ 6 ದಶಲಕ್ಷ ಗ್ಯಾಲನ್ ನೀರು ಅವಶ್ಯಕತೆಗಾಗಿ ಯೋಜನೆ ತಯಾರಾಗುತ್ತಿದೆ.

ಆ) ಈ ಸದಕ್ಕೆ ಸರ್ವೆ ನಡೆಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ನಾರಾಯಣರಾವ್ ಮನಹಳ್ಳಿ.—ಬೀದರ್ ನಗರಕ್ಕೆ ಕುಡಿಯುವ ನೀರಿನ ಯೋಜನೆ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದಾರೆ. ಮುಂದೆ ಯಾವುದಾದರೂ ಕ್ರಮ ತೆಗೆದುಕೊಳ್ಳುವ ಯೋಚನೆ ಇದೆಯೇ ?

ಶ್ರೀ ಎಂ. ಚಂದ್ರಶೇಖರ್.—ನಾನು ಉತ್ತರದಲ್ಲಿ ತಿಳಿಸಿರುವಂತೆ ದಿನಂಪ್ರತಿ 6 ದಶಲಕ್ಷ ಗ್ಯಾಲನ್ ನೀರಿನ ಅವಶ್ಯಕತೆಗಾಗಿ ಲಕ್ಷ ಎಸ್ಟಿಮೇಟಿಗಾಗಿ ಸರ್ವೆ ಆಗಬೇಕಾಗಿದೆ. ಸರ್ವೆ ಆದಮೇಲೆ ಮುನಿಸಿಪಾಲಿಟಿ ವತಿಯಿಂದ, ಸರ್ಕಾರದ ವತಿಯಿಂದ ಮತ್ತು ವಿನೂ ಇಲಾಖೆ ವತಿಯಿಂದ ಎಷ್ಟು ಹಣ ಬರುತ್ತದೆಂಬುದನ್ನು ನೋಡಿಕೊಂಡು ಕಾಮಗಾರಿ ಪ್ರಾರಂಭ ಮಾಡುತ್ತೇವೆ. ಸರ್ವೆ ಆದಮೇಲೆ ಮಂಜೂರಾತಿ ಬಗ್ಗೆ ಮುಂದಿನ ಕ್ರಮ ಕೈಗೊಳ್ಳುತ್ತೇವೆ

ಶ್ರೀ ಕೆ. ಚನ್ನಬಸವನಗೌಡ.—ಮಾನ್ಯ ಉಪಾಧ್ಯಕ್ಷರೆ 158 ನೇ ಪ್ರಶ್ನೆಯೂ ಇದೇ ವಿಷಯಕ್ಕೆ ಸಂಬಂಧಪಟ್ಟಿರುವುದರಿಂದ ಎರಡೂ ಪ್ರಶ್ನೆಗಳನ್ನು ಒಂದೇ ಸಲ ತೆಗೆದುಕೊಳ್ಳಬಹುದು.

ಉಪಾಧ್ಯಕ್ಷರು.—ಕೆಲವು ಮಾಹಿತಿಗಳು ಬರಬೇಕಾಗಿರುವುದರಿಂದ 158ನೇ ಪ್ರಶ್ನೆಯನ್ನು ಕ್ಯಾರಿ ಓವರ್ ಮಾಡಲಾಗಿದೆ.

ಶ್ರೀ ಸಿ. ಬೆ ರೇಗೌಡ.—ಮಾನ್ಯ ಉಪಾಧ್ಯಕ್ಷರೆ, 151 ನೇ ಪ್ರಶ್ನೆಯನ್ನು ತಾವೇ ಕೇಳಿ. ಅದು ಬಹಳ ಮುಖ್ಯವಾದ ಪ್ರಶ್ನೆ. ತಮಗೆ ಕೇಳುವುದಕ್ಕೆ ಅಧಿಕಾರ ಇದೆ.

ಉಪಾಧ್ಯಕ್ಷರು.—ತಮಗೆ ಆಥರೈಸ್ ಮಾಡಿದ್ದಾರಾ ? ಮಾನ್ಯ ತಿಮ್ಮಪ್ಪ ಹೆಗಡೆಯವರಿದ್ದಾರೆ. ನೀವು ಏತಕ್ಕೆ ಹೇಳುತ್ತಿದ್ದೀರಿ ?

ಶಾನುಭೋಗರ ಮತ್ತು ಪಟೇಲರುಗಳಿಗೆ ವಿಶ್ರಾಂತಿ ವೇತನ ಕೊಡುವ ಬಗ್ಗೆ

150 ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ. (ಸಾಗರ್)— ಮಾನ್ಯ ಕಂದಾಯಮಂತ್ರಿಗಳು ಈ ಕೆಳಗಿನಕಂಡ ಪ್ರಶ್ನೆಗಳನ್ನು ಉತ್ತರಿಸುವರೇ :—

ಅ) 1961 ರಲ್ಲಿ ಗ್ರಾಮಾಧಿಕಾರಿಗಳ ಸೇವೆಯನ್ನು ರದ್ದು ಮಾಡಿದ ಶಾಸನ ಜಾರಿಗೆ ಬಂದಿದ್ದರೂ ರಾಜ್ಯದಲ್ಲಿ 1970 ರವರೆಗೂ ಶಾನುಭೋಗರು ಮತ್ತು ಪಟೇಲರು ಸೇವೆನೀಡಿರುವುದು ನಿಜವೇ ;

ಆ) ಈ ಅವಧಿಗೆ ವೇತನ ಅಥವಾ ಸಂಬಳ ಎಲ್ಲರಿಗೂ ಪಾವತಿಯಾಗಿದೆಯೆ ;

ಇ) ಹಾಗಿದ್ದಲ್ಲಿ ರಾಜ್ಯದ ಎಲ್ಲಾ ಭಾಗಗಳಲ್ಲೂ ಒಂದೇ ಕ್ರಮ ಅನುಸರಿಸಲಾಗಿದೆಯೇ ;

ಈ) ಇವರುಗಳಿಗೆ ಬವಣೆಭತ್ಯ, ಪರಿಹಾರ, ಪೆನಷನ್ ನಗೈರೆ ಕೊಡುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ;

ಉ) ಸದರಿ ಕೆಲಸಗಳಲ್ಲಿ ಕೆಲವು ಕಡೆ ಗುಮಾಸ್ತೆಯಾಗಿ ಮತ್ತು ಕೆಲವೆಡೆ ತಾತ್ಕಾಲಿಕ ಮಾಡಿರುವವರ ಬಗ್ಗೆ ಸರಕಾರದವರು ಕೊಡಲಿರುವ ಸೌಲಭ್ಯಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—ಅ) ಪಟೇಲರುಗಳ ಸೇವೆಯ ಅವಧಿಯನ್ನು 31-12-77 ರವರೆವಿಗೂ ಕೆಲ ಶಾನುಭೋಗರುಗಳ ಸೇವೆಯ ಅವಧಿಯನ್ನು ಅವರು ಸಲ್ಲಿಸಿದ್ದ ರಿಟ್ ಅರ್ಜಿಯ ತಡೆಯಾಜ್ಞೆ ರದ್ದಾಗುವವರೆಗೂ ಅಥವಾ ಅವರ ಜಾಗದಲ್ಲಿ ಕಾನೂನು ರೀತಿ ನೇಮಕಗೊಂಡ ಗ್ರಾಮ ಲೆಕ್ಕಿಗರು ಕೆಲಸಕ್ಕೆ ಹಾಜರಾಗುವವರೆಗೂ ಮುಂದುವರಿಸಲಾಗಿತ್ತು.

ಆ) ಪಾವತಿಯಾಗದ ಬಗ್ಗೆ ವರಡಿ ಬಂದಿರುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮಾಜಿ ಶಾನುಭೋಗರಿಗೆ ಈಗಾಗಲೇ ಅನುಕಂಪಭತ್ಯೆ ಅಥವಾ ಪಿಂಚಿಣಿ ಕೊಡಲು ಸರ್ಕಾರ ಆಜ್ಞೆ ಹೊರಡಿಸಿದೆ. ಮತ್ತು ಮಾಜಿ ಪಟೇಲರಿಗೆ ಅನುಕಂಪ ಭತ್ಯನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಅವರು ಕೆಲಸ ಮಾಡಿದ ಅವಧಿಯಲ್ಲಿ ಅವರಿಗೆ ಅರ್ಹತೆ ಆಧಾರದ ಮೇಲೆ ಸಂಬಳ ಅಥವಾ ಪೋಟಗಿ ಕೊಡಲಾಗಿದೆ

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶಾನುಭೋಗರುಗಳಿಗೆ ಸೇವೆಯ ಅವಧಿಯನ್ನು ಮುಂದುವರೆಸಿ ಪಟೇಲರಿಗೆ ಕೊಡದಿರುವುದಕ್ಕೆ ಕಾರಣ ಏನು?

ಶ್ರೀ ವಿ. ಎಲ್. ಪಾಟೀಲ್.—ಈ ಬಗ್ಗೆ ಹಿಂದಿನ ಸರ್ಕಾರ ಪರಿಶೀಲನೆ ಮಾಡಿಲ್ಲ ಈಗ ನಾವು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದಿನ ಸರ್ಕಾರ ಮಾಡಿಲ್ಲ ಈ ಸರ್ಕಾರ ಕೊಡಬೇಕಾಗಿತ್ತು ಸಂಬಳ, ನಿವೃತ್ತಿ ವೇತನ ಹಾಗೂ ಪರಿಹಾರವನ್ನು ಶಾನುಭೋಗರಿಗೆ ಕೊಡುವಾಗ ಮಾಜಿ ಪಟೇಲರಿಗೂ ಇವನ್ನು ಕೊಡುವ ಬಗ್ಗೆ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳುತ್ತದೆಯೇ ?

ಶ್ರೀ ವಿ. ಎಲ್. ಪಾಟೀಲ್.—ತಾವೂ ಕೂಡಾ ಅಧ್ಯಕ್ಷರಾಗಿದ್ದೀರಿ. ತಮಗೂ ಗೊತ್ತಿದೆ. ಮೊನ್ನೆ ಒಂದು ವಾರದ ಕೆಳಗೆ ಮುಖ್ಯಮಂತ್ರಿಗಳವರ ಜೊತೆ ಚರ್ಚೆ ಮಾಡಿದ್ದೀರಿ. ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ನಡೆಯುವುದರಲ್ಲಿದ್ದೀರಿ. ಆ ಬಗ್ಗೆ ವಿಚಾರ ಮಾಡಿ ಸುಮಾರು 6 ತಿಂಗಳೊಳಗೆ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಶಾನುಭೋಗರು ಮತ್ತು ಪಟೇಲರು ಹೇಗೆ ಸಮಾಜಕ್ಕೆ ಸೇವೆ ಸಲ್ಲಿಸಿದ್ದಾರೋ ಹಾಗೇ ತೋಟಿ ತಳವಾರರೂ ಸೇವೆ ಸಲ್ಲಿಸಿರುತ್ತಾರೆ. ಅವರಿಗೂ ನಿವೃತ್ತಿ ವೇತನ ಮತ್ತು ವಿಶ್ರಾಂತಿ ವೇತನವನ್ನು ಕೊಡುವ ವ್ಯವಸ್ಥೆ ಮಾಡುತೀರಾ ?

ಶ್ರೀ ವಿ. ಎಲ್. ಪಾಟೀಲ್.—ಜನರ ಸೇವೆ ಮಾಡುವ ಎಲ್ಲ ಜನರಿಗೂ. ತೋಟಿ ತಳವಾಡ ಶಾನುಭೋಗ, ಪಟೇಲರಿಗೆ ನಿವೃತ್ತಿ ವೇತನ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಶಾನುಭೋಗರಲ್ಲಿ ಕೆಲವರು ಬಹಳ ಶ್ರೀಮಂತರ್ರು ಇದ್ದಾರೆಂದು ಬಹಳ ಜನರಿಗೆ ಅದನ್ನು ಕೊಟ್ಟಿರುವುದಿಲ್ಲ. ಈ ಬಗ್ಗೆ ವ್ಯತ್ಯಾಸ ಮಾಡದೇ ಎಲಾ ಶಾನುಭೋಗರಿಗೂ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವಿ. ಎಸ್. ಪಾಟೀಲ್.—ಪಟೇಲರ ಜೊತೆ ಈ ಶಾನುಭೋಗರ ಬಗ್ಗೆಯೂ ಪರಿಶೀಲನೆ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಮಾನ್ಯ ಮಂತ್ರಿಗಳು ಅವರ ಖಾತೆಯಲ್ಲಿರತಕ್ಕ ಎಲ್ಲಾ ಸರ್ಕುಲರ್ಸ್‌ನ್ನೂ ಓದಿಕೊಂಡು ಬರಬೇಕಾಗುತ್ತದೆ.

ಉಪಾಧ್ಯಕ್ಷರು.—ಸಲಹೆ ಬೇಡ; ಪ್ರಶ್ನೆ ಕೇಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:—ಮಾನ್ಯ ಮಂತ್ರಿಗಳು ಸದನಕ್ಕೆ ತಪ್ಪು ತಿಳುವಳಿಕೆ ಕೊಡುತ್ತಿದ್ದಾರೆ. ತೋಟಿ ತಳವಾರ, ನೀರುಗಂಟಿಗಳ ಬಗ್ಗೆ ಮಾನ್ಯ ಸದಸ್ಯರೊಬ್ಬರು ಕೇಳಿದ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಪರಿಶೀಲಿಸಲಾಗುವುದೆಂದು ಉತ್ತರ ಕೊಟ್ಟರು. ತೋಟಿ ತಳವಾರರ ಬಗ್ಗೆ, ನೀರುಗಂಟಿಗಳ ಬಗ್ಗೆ ಈಗಾಗಲೇ ಸರ್ಕುಲರ್ ಜಾರಿಯಾಗಿದೆ. ಸರ್ಕಾರಿ ಆಜ್ಞೆ ಜಾರಿಯಾಗಿದ್ದೆ. ಕೆಲವು ಕಡೆ ಕೊಟ್ಟಿದ್ದು ಕೆಲವು ಕಡೆ ರೆಕಾರ್ಡ್ ಬೆಲ್ಡ್ ಆಫ್ ಆಗದೇ ಇರುವುದರಿಂದ ಕೊಟ್ಟಲ್ಲವೆಂದು ಕಾಣುತ್ತದೆ. ಅದನ್ನೂ ಕೂಡಾ ಪರಿಶೀಲಿಸುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದರು. ಆ ಸರ್ಕಾರಿ ಆಜ್ಞೆ ಜಾರಿಯಲ್ಲಿ ಇದೆಯೋ ಇಲ್ಲವೋ, ಅಥವಾ ವಿತ್‌ಡ್ರಾ ಮಾಡಿದ್ದೀರಾ ? ಈ ಬಗ್ಗೆ ಮಂತ್ರಿಗಳು ಹೇಳಬೇಕು. ಇಲ್ಲದಿದ್ದರೆ ತಪ್ಪು ವಿಷಯ ಪರದಿಯಲ್ಲಿ ಹೋಗುತ್ತದೆ, ಇದರಿಂದಾಗಿ ಹಿಂದಿನ ಸರ್ಕಾರ ಏನೂ ಮಾಡಿಲ್ಲ ಎನ್ನುವ ಭಾವನೆ ಬರುತ್ತದೆ.

Mr. DEPUTY SPEAKER.—This is too much

ಶ್ರೀ ಎಸ್. ಆರ್. ಬೊಮ್ಮಾಯಿ.—ಹಿಂದಿನ ರೆವಿನ್ಯೂ ಮಂತ್ರಿಗಳು ತೋಟಿ ತಳವಾರರಿಗೆ ಇಗಾಗಲೇ 75 ರೂಪಾಯಿ ಕೊಡುವ ಒಂದು ಆಜ್ಞೆಯನ್ನು ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿದ್ದು ಸರಿ ಇದೆ.

ಶ್ರೀ ಮಲ್ಲಿಕಾರ್ಜುನ ಎಂ ಖಾರ್ಗೆ.—ಇದು ಬಹಳ ಮಹತ್ವದ ಪ್ರಶ್ನೆ ಇದೆ. ಪಟೇಲರ ಬಗ್ಗೆ ಕೂಡಾ ಹಿಂದಿನ ಸರ್ಕಾರ ಒಂದು ಭರ್ಜಿಯನ್ನು ತೆಗೆದುಕೊಂಡಿತ್ತು. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ. ಎಲ್. ಪಾಟೀಲ್.—ಈ ಬಗ್ಗೆ ಬೇರೆ ಬೇರೆ ಕಾಲದಲ್ಲಿ ಮಂತ್ರಿಗಳ ಮುಂದೆ ಚರ್ಚೆಯಾಗಿದೆ. ಈ ವಿಷಯವನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ ಆದರೆ ಇದು ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ಇನ್ನು 6 ತಿಂಗಳಲ್ಲಿ ಇದನ್ನು ಅನುಷ್ಠಾನಕ್ಕೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ಶಾನುಭೋಗರು ಸುಪ್ರೀಮ್‌ಕೋರ್ಟಿಗೆ ಹೋಗಿ ಆದೇಶ ತಂದ ಮೇಲೆ ಅವರಿಗೆ ಕೊಟ್ಟರಿ. ಜೋಡಿ ಗ್ರಾಮಗಳಲ್ಲಿ ಯಾರು ಕೆಲಸ ಮಾಡಿದ್ದಾರೆ ಅವರಿಗೆ ಕೊಡುವುದಕ್ಕೆ ಬರುವುದಿಲ್ಲವೆಂದು ತಿಳಿಯಿತು. ಅವರಿಗೂ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೀರಾ? ಶಾನುಭೋಗರು ಎಷ್ಟು ಕೆಲಸ ಮಾಡಿದ್ದಾರೋ ಅಷ್ಟೇ ಕೆಲಸವನ್ನು ಪಟೇಲರೂ ಮಾಡಿದ್ದಾರೆ. ಆದರೆ ಇವರಿಗೆ ಕೊಡದಿರುವುದಕ್ಕೆ ಕಾರಣ ಏನು ?

ಶ್ರೀ ಬಿ. ಎಲ್. ಪಾಟೀಲ್.—ಇದನ್ನು ನಾನು ಅನುಶಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ ಮತ್ತು ಮಾನ್ಯ ಸದಸ್ಯರ ಸಲಹೆ ಸಮರ್ಪಕವಾಗಿದ್ದು ಅದನ್ನು ಪರಿಶೀಲನೆ ಮಾಡುತ್ತೇನೆ.

ಗದಗ—ಬೆಟಿಗೇರಿ ನೀರು ಪೂರೈಕೆ ಬಗ್ಗೆ

155 ಸಿ. ಎಸ್. ಮುತ್ತಿನಪೆಂಡಿಮಠ (ಗದಗ).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೆ —

ಅ) ಅವಳಿ ನಗರಗಳಾದ ಗದಗ್-ಬೆಟಿಗೇರಿಯಲ್ಲಿ ಸುಮಾರು 1.5 ಲಕ್ಷ ಜನಸಂಖ್ಯೆ ಇದ್ದು ನೀರಿನ ಅಭಾವದಿಂದ ತೀವ್ರ ತೊಂದರೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಈ ವರೆಗೆ ನೀರು ಪೂರೈಕೆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ;

ಇ) ಇಲ್ಲವಾದಲ್ಲಿ ಸರ್ಕಾರ ಅತಿ ಶೀಘ್ರದಲ್ಲಿ ನೀರು ಪೂರೈಕೆ ಮಾಡಲು ಸಮಗ್ರ ಯೋಜನೆ ಹಾಕಿಕೊಳ್ಳುವುದೆ ?

ಶ್ರೀ ಎಂ ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ವಸತಿ ಸೌಕರ್ಯ ಸಚಿವರು).—ಅ) ಸರ್ಕಾರದ ಗಮನಕ್ಕೆ ಬಂದಿದೆ

ಆ) 1) ಗದಗ್-ಬೆಟಿಗೇರಿ ನಗರಕ್ಕೆ ತುಂಗಭದ್ರ ನದಿಯಿಂದ ನೀರು ಸರಬರಾಜು ಮಾಡಲು ಸರ್ಕಾರ 708.00 ಲಕ್ಷ ರೂ. ಗಳ ಅಂದಾಜನ್ನು ಮಂಜೂರು ಮಾಡಿದೆ.

(2) ತಾತ್ಕಾಲಿಕ ನಿವಾರಣೆಗಾಗಿ ಇದುವರೆಗೆ ಒಟ್ಟಾಗಿ 43 ಕೊಳವೆಬಾವಿಗಳನ್ನು ತೋಡಿ 35 ಫಲಪ್ರದವಾದ ಬಾವಿಗಳನ್ನು ಸೂಕ್ತವಾದ ಪಂಪುಗಳನ್ನು ಜೋಡಿಸಿ ನೀರನ್ನು ಒದಗಿಸಲಾಗುತ್ತಿದೆ.

(3) ಈಗಾಗಲೇ 3 ಕ್ಲೋರಿನೇಟರ್‌ಗಳನ್ನು ಜೋಡಿಸಲಾಗಿದೆ. ಇನ್ನು 7 ಕ್ಲೋರಿನೇಟರ್‌ಗಳನ್ನು ಜೋಡಿಸಲು ಕ್ರಮ ಕೈಗೊಳ್ಳಲಾಗಿದೆ.

(ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಧರ್ಮಸಿಂಗ್.—ಸ್ವಾಮಿ, 7.40 ಲಕ್ಷ ರೂಪಾಯಿ ಮಂಜೂರು ಮಾಡಿದ್ದೇವೆಂದು ಹೇಳಿದಿರಿ. ಈಗ ಜನಸಂಖ್ಯೆ ಜಾಸ್ತಿಯಾಗಿದ್ದು ನೀರಿನ ತೊಂದರೆ ಬಹಳ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ? ಈಗಾಗಲೇ ಒಂದು ಯೋಜನೆ ಇದ್ದು, ಒಂದು ಸಾವಿರ ಗ್ಯಾಲನ್ ನೀರಿಗೆ 13 ರೂಪಾಯಿ ಬೀಳುವುದರಿಂದ ಅದನ್ನು ಎಲ್ ಐ. ಸಿ. ಯವರು ಒಪ್ಪುತ್ತಿಲ್ಲ. ಅದಕ್ಕೋಸ್ಕರ ಬೇರೆ ಒಂದು ಯೋಜನೆ ಮಾಡಲು ಹಿಂದಿನ ಸರ್ಕಾರ ಒಪ್ಪಿತ್ತು. ಈ ವಿಚಾರದಲ್ಲಿ ನಾವು ಎಲ್ ಐ ಸಿ. ಛೇರ್ಮನ್‌ಗೆ ಭೇಟಿಯಾದಾಗ ಕಡಿಮೆ ವೆಚ್ಚದಲ್ಲಿ ಒಂದು ಯೋಜನೆ ತಯಾರು ಮಾಡಿ ಎಂದು ಹೇಳಿದ್ದರ ಮೇರೆಗೆ ತಜ್ಞರ ಸಮಿತಿಗೆ ಇದನ್ನು ಹಿಂದಿನ ಸರ್ಕಾರ ಒಪ್ಪಿಸಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಹಿಂದಿನ ಮಂತ್ರಿಗಳಿಗೆ ಈ ಬಗ್ಗೆ ತಿಳುವಳಿಕೆ ಇದ್ದರೂ ಕೂಡ ಏತಕ್ಕೆ ಮಂಜೂರಾತಿ ಕೊಟ್ಟರೋ ಗೊತ್ತಾಗಲಿಲ್ಲ. ಆಗಲೇ ಇದನ್ನು ನಿರಾಕರಣೆ ಮಾಡಬಹುದಾಗಿತ್ತು. ನಾವು ಕಾವೇರಿ ನೀರಿನ ಬಗ್ಗೆ ಎಲ್. ಐ ಸಿ ಅಧ್ಯಕ್ಷರನ್ನು ಭೇಟಿಯಾಗುವುದಕ್ಕೆ ಹೋದಾಗ, ಹುಬ್ಬಾರಿ ವೆಚ್ಚವಾದರೆ ನಾಗರೀಕರು ಕೊಡುವುದಕ್ಕೆ ಸಾಧ್ಯವೆ ಎಂಬುದನ್ನು ಕೇಳಿದರು.